# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

ದಿನಾಂಕ 24 ನೇ ಅಕ್ಟೋಬರ್ ಮಾಹೆ 2025 ನೇ ಇಸವಿ.

**ಸಿ.ಸಿ. ನಂಃ 231/2025**

ರಾಜ್ಯ ಸರ್ಕಾರದ ಪರವಾಗಿ,
ಆರಕ್ಷಕ ಉಪ ನಿರೀಕ್ಷಕರು,
ಅಜೆಕಾರು ಆರಕ್ಷಕ ಠಾಣೆ,
ಅಜೆಕಾರು ಉಡುಪಿ ಜಿಲ್ಲೆ. .... ಪಿರ್ಯಾದುದಾರರು.

ವಿರುದ್ಧ -

ಸದಾನಂದ ,
ಪ್ರಾಯ 32 ವರ್ಷ
ತಂದೆಃ ಶೇಖರ ಪರವ ,
ವಾಸಃ ಮಲ್ಲಿಗೆ ಮನೆಯ ಹತ್ತಿರ ,
ರೆಂಜಾಳ ಗ್ರಾಮ , ಕಾರ್ಕಳ ತಾಲೂಕು . ಆರೋಪಿತರು

## ದೋಷಾರೋಪಣೆ

ಶ್ರೀಮತಿ ಶರ್ಮಿಳಾ ಸಿ ಎಸ್., ಬಿ.ಎ.ಎಲ್., ಎಲ್‌ಎಲ್.ಎಂ ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಈ ಮೇಲ್ಕಂಡ ನಿಮ್ಮನ್ನು ಕೆಳಕಂಡಂತೆ ದೋಷಾರೋಪಿಸುತ್ತೇನೆ.

ಮೊದಲನೆಯದಾಗಿ , ಆರೋಪಿಯಾದ ನೀವು ದಿನಾಂಕ – 15.04.2025 ರಂದು ರಾತ್ರಿ 8.30 ಗಂಟೆಗೆ ಕಾರ್ಕಳ ತಾಲೂಕು ಕೆರ್ವಾಶೆ ಗ್ರಾಮದ ಬಂಗ್ಲೆಗುಡ್ಡೆ ದರ್ಖಾಸು ಮನೆ ಎಂಬಲ್ಲಿರುವ ಸಾಕ್ಷಿ 1 ರವರಿಗೆ ಸೇರಿದ ಮನೆಗೆ ಕೆಎ-20-ಇಆರ್-9574 ಸಂಖ್ಯೆಯ ಬೈಕಿನಲ್ಲಿ ಬಂದು ಹಣದ ವಿಚಾರವಾಗಿ ಸಾಕ್ಷಿ 1 ರವರನ್ನು ಉದ್ದೇಶಿಸಿ - ಬೇವರ್ಸಿ ರಂಡೆ ನೀನು ಹಣ ಕೊಡುವುದಿಲ್ಲವ ಎಂದು ಅವಾಚ್ಯ ಶಬ್ದಗಳಿಂದ ಬೈದು , ಆ ಮೂಲಕ ಬಿ ಎನ್ ಎಸ್ 2023 ರ ಕಲಂ 352 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೆಯದಾಗಿ ಆರೋಪಿಯಾದ ನೀವು ಮೇಲೆ ತಿಳಿಸಿದ ದಿನಾಂಕ , ಸಮಯ ಮತ್ತು ಸ್ಥಳದಲ್ಲಿ ಸಾಕ್ಷಿ 1 ರವರ ತಲೆಯ ಜುಟ್ಟಿಗೆ ಕೈ ಹಾಕಿ ಎಳೆದು ಕೆನ್ನೆಗೆ ಕೈಯಿಂದ ಹೊಡೆದು ಹಲ್ಲೆ ನಡೆಸಿ ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿದ್ದು , ಆ ಮೂಲಕ ಬಿ ಎನ್ ಎಸ್ 2023 ರ ಕಲಂ 115(2) ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೂರನೆಯದಾಗಿ ಆರೋಪಿಯಾದ ನೀವು ಮೇಲೆ ತಿಳಿಸಿದ ದಿನಾಂಕ , ಸಮಯ ಮತ್ತು ಸ್ಥಳದಲ್ಲಿ , ಅಲ್ಲಿದ್ದ ಇತರರ ಎದುರು ಸಾಕ್ಷಿ 1 ರವರ ಮಾನಕ್ಕೆ ಕುಂದು ಉಂಟಾಗುವಂತೆ ಅವಳ ಮೈಗೆ ಕೈ ಹಾಕಿ ಅಸಭ್ಯವಾಗಿ ಎಳೆದಾಡಿದ್ದು , ಆ ಮೂಲಕ ಬಿ ಎನ್ ಎಸ್ 2023 ರ ಕಲಂ 74 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ನಾಲ್ಕನೆಯದಾಗಿ ಆರೋಪಿಯಾದ ನೀವು ಮೇಲೆ ತಿಳಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸಾಕ್ಷಿ 1 ಮತ್ತು ಸಾಕ್ಷಿ 2 ರವರನ್ನು ಉದ್ದೇಶಿಸಿ ನೀನು ಮತ್ತು ನಿನ್ನ ಗಂಡ ಹೇಗೆ ಬದುಕುತ್ತೀರಿ ನೋಡಿಕೊಳ್ಳುತ್ತೇನೆ , ನಿಮ್ಮನ್ನು ಜೀವ ಸಮೇತ ಬಿಡುವುದಿಲ್ಲ ಎದು ಕೊಲೆ ಬೆದರಿಕೆಯನ್ನು ಹಾಕಿ , ಆ ಮೂಲಕ ಬಿ ಎನ್ ಎಸ್ 2023 ರ ಕಲಂ 351(2) ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ದೋಷಾರೋಪಣಗಳಿಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಆರೋಪಿತರಿಗೆ ಮೇಲಿನ ದೋಷಾರೋಪಣೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ. )

(ಶರ್ಮಿಳಾ ಸಿ ಎಸ್ )
ಹಿ. ಸಿ. ನ್ಯಾ ಮತ್ತು ಹೆ. ಮು. ನ್ಯಾ ದಂ . ಕಾರ್ಕಳ

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

ದಿನಾಂಕ 24 ನೇ ಅಕ್ಟೋಬರ್ ಮಾಹೆ 2025 ನೇ ಇಸವಿ.

**ಸಿ.ಸಿ. ನಂಃ 231/2025**

ರಾಜ್ಯ ಸರ್ಕಾರದ ಪರವಾಗಿ,
ಆರಕ್ಷಕ ಉಪ ನಿರೀಕ್ಷಕರು,
ಅಜೆಕಾರು ಆರಕ್ಷಕ ಠಾಣೆ,
ಅಜೆಕಾರು ಉಡುಪಿ ಜಿಲ್ಲೆ. .... ಪಿರ್ಯಾದುದಾರರು.

ವಿರುದ್ಧ -

ಸದಾನಂದ ,
ಪ್ರಾಯ 32 ವರ್ಷ
ತಂದೆಃ ಶೇಖರ ಪರವ ,
ವಾಸಃ ಮಲ್ಲಿಗೆ ಮನೆಯ ಹತ್ತಿರ ,
ರೆಂಜಾಳ ಗ್ರಾಮ , ಕಾರ್ಕಳ ತಾಲೂಕು . ಆರೋಪಿತರು

### ದೋಷಾರೋಪಣೆ (ಚಾರ್ಜ್)

ಪ್ರಶ್ನೆ 1ಃ ಈ ದಿನ ನಿಮಗೆ ಓದಿ ಹೇಳಿ ವಿವರಿಸಿದ ಮತ್ತು ನಿಮ್ಮ ಮೇಲೆ ಆರೋಪಿಸಿರುವ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುವಿರಾ?

ಉತ್ತರಃ

ಪ್ರಶ್ನೆ 2ಃ ನಾವು ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಒಪ್ಪಿಕೊಳ್ಳುವಿರಾ ?

ಅಥವಾ ವಿಚಾರಣೆ ಆಗಬೇಕೆಂದು ಕೇಳುವಿರಾ?

ಉತ್ತರಃ

ಮೇಲ್ಕಂಡ ವಿಚಾರಣೆಯನ್ನು ಆರೋಪಿಗೆ ನನ್ನ ಸ್ವಂತ ವಿಚಾರಣೆಯಲ್ಲಿ ಓದಿ ಹೇಳಿ ವಿವರಿಸಿ, ಅವರು ಅರ್ಥ ಮಾಡಿಕೊಂಡ ನಂತರ ಉತ್ತರಗಳನ್ನು ಮತ್ತು ಸದರಿ ಉತ್ತರಗಳು ಪೂರ್ಣವಾಗಿಯೂ ಮತ್ತು ಸತ್ಯವಾಗಿಯೂ ಇದೆಯೆಂದು ದೃಢೀಕರಿಸುತ್ತೇನೆ.

ದಿನಾಂಕ 24 ನೇ ಅಕ್ಟೋಬರ್ ತಿಂಗಳು 2025 ರಂದು ಮೇಲ್ಕಂಡಂತೆ ನಮೂದಿಸಿಕೊಳ್ಳಲಾಯಿತು.

ಹಿ ಸಿ ನ್ಯಾಮತ್ತು ಹೆ ಮು ನ್ಯಾದಂ, ಕಾರ್ಕಳ